ನಂದೀದುರ್ಗದ ಡಿವಿಜ್ಯ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಬೆಂಗಳೂರ ನಗರ್ತರಪೇಟೆಯಲ್ಲಿರುವ ಥೇ ಮಲ್ಲಣ್ಣನ ವಿಷಯದಲ್ಲಿ—

ಸ್ಯ 1895—96ನೇ ಇಸವಿ ದಿವಾಳಿ ಕೇಸ್ ನಂಬರು 87.

ಹುಕುಂ,

ಮೇಲ್ಕಂಡ ಮಲ್ಲಂಣನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂದವು ಈ ಕೋರ್ಟು ರೂಬರೂ ಆರ್ಜೀದಾರನನ್ನೂ ಮತ್ತು ಸದರೀಯವನ ಲೇಣೇದಾರ್‌ರಾದ 1ನೇ ಬೆಂಗಳೂರು ಗಾಣಿಗರಪೇಟೆಯಲ್ಲಿರುವ ಚನ್ನಮ್ಮನ ಮಗ ಮುನಿಯಪ್ಪನ ತರಫ ಅಡ್ವೋಕೇಟ್ ಮಿಸ್ಟರ್ ಎಸ್. ಸುಬ್ಬರಾಯರ ಯದುರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು ತನಗೆ ಈ ದರ್ಯಾಫ್ತ್ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—2ನೇ ಬೆಂಗಳೂರು ನಗರ್ತರಪೇಟೆಯಲ್ಲಿರುವ ಹೊಸಕೋಟೆ ನಂಜುಂಡಪ್ಪನ ಮಗ ದೊಡ್ಡ ಬಸಣ್ಣ 3ನೇ ಡಿಟೋ ಸ್ಥಳದಲ್ಲಿರುವ ಚಾಗಲಟ್ಟಿ ಜಂಗಮರ ದೊಡ್ಡನಂಜಯ್ಯ 4ನೇ ಬೆಂಗಳೂರು ಮಾಮೂಲುಪೇಟೇಲಿರುವ ಗುಬ್ಬಿ ತೋಟದಪ್ಪ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಮಲ್ಲಣ್ಣನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸೂಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧೆ ಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ. ಯಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1895ನೇ ಇಸವಿ ನವಂಬರ್ 29ನೇ ತಾರೀಖಿನಲ್ಲಿ ಈ ಕೋರ್ಟು ಮೊಹರು ನಮ್ಮ ದಸ್ತಖತ ನಿಸಿ ಕೊಡಲ್ಪಟ್ಟಿತು.

ರುಜುವಾತಾದ ಸೂಲದಪಟ್ಟಿ

ನಂಬರು	ಲೇಣೇದಾರ ಹೆಸರು ವಗೆರೆ.	ಸೂಲದ ಮೊಬಲಗು	ಪರಾ
1	ಬೆಂಗಳೂರು ಗಾಣಿಗರ ಪೇಟೇಲಿರುವ ಚನ್ನಮ್ಮನ ಮಗ ಮುನಿಯಪ್ಪ	18—9—9	ಬೆಂಗಳೂರು ಸಬ್ ಜಡ್ಜಿಯವರ ಕೋರ್ಟು 1894-95ನೇ ಇಸವಿ ಸ್ಮಾಲ್‌ಕಾಜ್ 1527ನೇ ನಂ. ಡಿಕ್ರಿಯ ಡಿಟೋ ಕೋರ್ಟು, ಜಾರಿ 1894-95ನೇ ಇಸವಿ 2102ನೇ ನಂ. ಬಾಡಿ ವಾರಂಟಿನಲ್ಲಿ ಕಂಡ ಮೊಬಲಗು
	ಡಿಟೋ ಯವರಿಗೆ	50—0—0	ಪತ್ರದ ಬಗೆ
2	ಬೆಂಗಳೂರು ನಗರ್ತರಪೇಟೇಲಿರುವ ಚಾಗಲಟ್ಟಿ ಜಂಗಮರ ದೊಡ್ಡ ನಂಜಯ್ಯ	20—0—0	ಲಿಖಿತದ ಬಗೆ
3	ಡಿಟೋ ಸ್ಥಳದಲ್ಲಿರುವ ಹೊಸಕೋಟೆ ನಂಜುಂಡಪ್ಪನ ಮಗ ದೊಡ್ಡ ಬಸಣ್ಣ	200—0—0	ಡಿಟೋ
4	ಬೆಂಗಳೂರು ಮಾಮೂಲುಪೇಟೇಲಿರುವ ಗುಬ್ಬಿ ತೋಟದಪ್ಪ	28—0—0	ಡಿಟೋ

ಸ್ಯ 1896ನೇ ಇಸವಿ ಫಿಬ್ರವರಿ ತಿಂಗಳ 26ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ದಿವಾಳಿಯಾದ ಡಿಕ್ರಿ ದೇಣೇದಾರ ಮಾಲೂರಲ್ಲಿರುವ ಕೊರಚರ ಅರಸನಮಗ ಮುನಿನಂಜನ ವಿಷಯದಲ್ಲಿ—

ಸ್ಯ 1894—95ನೇ ಇಸವಿ ದಿವಾಳಿ ವ್ಯಾಜ್ಯ ನಂಬರ್ 389.

ಹುಕುಂ.

ಮೇಲ್ಕಂಡ ಮುನಿನಂಜನು ಖುಲಾಸೆ ಯಾಗಬೇಕೆಂದು ಕೋರಿ ಬರದುಕೊಂಡ ಅರ್ಜಿಯು ಈ ಕೋರ್ಟು ರೂಬರೂ ಅರ್ಜಿದಾರನ ಸಮಕ್ಷಮದಲ್ಲಿ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದ್ಮಾಡಲ್ಪಡುವ ಲೇಣೇದಾರಿಗೆ ಈ ದರ್ಯಾಫ್ತ್ ನೋಟಿಸ್ ಜಾರಿಯಾಗಿದ್ದಾಗ್ಯೂ ತಾವೆ ಖುದ್ದಾಗಿಯಾಗಲಿ ಲಾಯರ ಮೂಲಕವಾಗಿ ಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ—ಮಾಲೂರು ಗಣೇಶಬ್ಯಾಂಕ್ ಲಿಕ್ವಿಡೇಟರ್ ಬಿ. ಸುಬ್ಬರಾವ್.

ಸದರೀ ಮುನಿನಂಜನು ದಿವಾಳಿಯಾದವನೆಂದುನ್ನೂ ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದಲ್ಲಿನ ನಿರೂಪಣೆಗಳ ಫಲವನ್ನ ಹೊಂದುವದಕ್ಕೆ ಹಕ್ಕುದಾರನಾಗಿರುತ್ತಾನೆಂದು ಇದರಿಂದ ತೀರ್ಮಾನಿಸಲ್ಪಟ್ಟಿರುತ್ತದೆ. ಕೋರ್ಟು ಮಜಕೂರ್ ನಾಜರನ್ನು ಅರ್ಜಿ ದಿವಾಳಿಯಾದವನ ಜಿಂದಗಿಗೆ ರಿಸೀವರಾಗಿ ಮೊಕರರ್ ಮಾಡಲ್ಪಡತಕ್ಕದ್ದೆಂದುನ್ನೂ ಸದರೀ ರಿಸೀವರಾದವನು ಪಡನೆ ತನ್ನ ರಿಸೀವರ ಕೆಲಸಗಳಿಗೆ ವುದ್ಯುಕ್ತ ಪಡತಕ್ಕದ್ದೆಂದುನ್ನೂ ಸಹ ಹುಕುಂ ಮಾಡಲ್ಪಟ್ಟು ಇದೆ.

ಸ್ಯ 1895ನೇ ಇಸವಿ ಜುಲೈ ತಿಂಗಳ 31ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಮ್ಮ ದಸ್ತಖತ ನಿಸಿ ಕೊಡಲ್ಪಟ್ಟಿತು.

ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಜನರು ಅವರ ಹೆಸರಿಗೆ ಯದುರಾಗಿ ದಾಖಲಾಗಿರುವ ಸಾಲದ ಮೊಬಲಗುಗಳಿಗೆ ಲೇಣೇದಾರರೆಂದು ರುಜುವು ಮಾಡಿಧಾರೆಂದು ಇದರಿಂದ ನಿಶ್ಚಯಿಸಿ ತೀರ್ಮಾನ ಮಾಡಲ್ಪಟ್ಟಿರುತ್ತದೆ.

ನಂಬರು	ಲೇಣೇದಾರ್ರ ಹೆಸರು ವಿವರ ಮತ್ತು ವಾಸಸ್ಥಳ.	ಸಾಲವೆಂದು ರುಜುವಾದ ಮೊಬಲಗು.	ಸಾಲಗಳ ಸ್ವಭಾವ ಪ್ರತಿಭಲ ಮತ್ತು ಏನಾದರೂ ಈಡು.
1	ಮೂಲೂರು ಗಣೇಶಬ್ಯಾಂಕ್ ಲಿಕ್ವಿಡೇಟರ್ ಬಿ. ಸುಬ್ಬರಾವ್	ರೂ. ಆ. ಪೈ. 138—4—9	ಕೋಲಾರ ಮುನ್ಸೀಫ್ ಕೋರ್ಟ್ 1894—95ನೇ ಇಸವಿ ಜಾರಿ 284ನೇ ನಂ. ಬಾಡಿವಾರಂಟಿನಲ್ಲಿ ಕಂಡ ಮೊಬಲಗು.

ಸ್ಯ 1895ನೇ ಇಸವಿ ಅಕ್ಟೋಬರ್ 18ನೇ ತಾರೀಖಿನಲ್ಲಿ ಈ ಕೋರ್ಟ್ ಮೊಹರ್ ನಮ್ಮ ದಸ್ತಖತ್‌ನಿಶಿ ಕೊಡಲ್ಪಟ್ಟಿತು.

ದಿವಾಳಿಯಾದ ಡಿಶ್ರಿ ದೇಣೇದಾರ ಮೂಲೂರಲ್ಲಿರುವ ಕೊರಚರ ಗಂಗನಮಗ ಅರಸನ ವಿಷಯದಲ್ಲಿ—

ಸ್ಯ 1894—95ನೇ ಇಸವಿ ದಿವಾಳಿ ವ್ಯಾಜ್ಯ ನಂಬರು 390.

ಹುಕುಂ,

ಮೇಲ್ಕಂಡ ಅರಸನು ಖುಲಾಸೆ ಯಾಗಬೇಕೆಂದು ಕೋರಿ ಬರದುಕೊಂಡ ಅರ್ಜಿಯ್ದು ಈ ಕೋರ್ಟ್ ರೂಬರೂ ಅರ್ಜೀದ್ದಾರನ ಸಮಕ್ಷಮದಲ್ಲಿ ದರ್ಯಾಫ್ತಿ ಮಾಡಲ್ಪಟ್ಟಿತು. ಈ ಕೆಳಗೆ ನಮೂದ್ಮಾಡಲ್ಪಡುವ ಲೇಣೇದಾರ್ರಿಗೆ ಈ ದರ್ಯಾಫ್ತಿ ನೋಟಿಸ್ ಜಾರಿಯಾಗಿದ್ದಾಗ್ಯೂ ತಾವೇ ಖುದ್ದಾಗಿಯಾಗಲಿ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರೆಂದರೆ,—ಮೂಲೂರು ಗಣೇಶಬ್ಯಾಂಕು ಲಿಕ್ವಿಡೇಟರು ಬಿ. ಸುಬ್ಬರಾವು.

ಸದರೀ ಅರಸನು ದಿವಾಳಿಯಾದವನೆಂದೂನ್ನೂ ಸಿವಿಲ್ ಪ್ರೊಸೀಜ್ಯರ್ ಕೋಡಿನ 20ನೇ ಅಧ್ಯಾಯದಲ್ಲಿನ ನಿರೂಪಣೆಗಳ ಫಲವನ್ನು ಹೊಂದುವದಕ್ಕೆ ಹಕ್ದಾರನಾಗಿರುತ್ತಾನೆಂದೂನ್ನೂ ಇದರಿಂದ ತೀರ್ಮಾನಿಸಲ್ಪಟ್ಟಿರುತ್ತದೆ. ಕೋರ್ಟ್ ಮಜಕೂರು ನಾಜರನ್ನು ಐರ್ಜ ದಿವಾಳಿಯಾದವನ ಜಿಂದಗಿಗೆ ರಿಸೀವರಾಗಿ ನೊಕರರ್ಮಾಡಲ್ಪಡತಕ್ಕದೆಂದೂನ್ನೂ ಸದರೀ ರಿಸೀವರಾದವನು ಮಡನೆ ತನ್ನ ಸೀವರ ಕೆಲಸಗಳಿಗೆ ವುದ್ಯುಕ್ತ ಪಡತಕ್ಕದ್ದೆಂದೂನ್ನೂ ಸಹ ಹುಕುಂ ಮಾಡಲ್ಪಟ್ಟು ಇದೆ.

ಸ್ಯ 1895ನೇ ಇಸವಿ ಜುಲೈ ತಿಂಗಳ 31ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಮ್ಮ ದಸ್ತಖತ್ತುನಿಶಿ ಕೊಡಲ್ಪಟ್ಟಿತು.

ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಜನರು ಅವರ ಹೆಸರಿಗೆ ಯದುರಾಗಿ ದಾಖಲಾಗಿರುವ ಸಾಲದ ಮೊಬಲಗುಗಳಿಗೆ ಲೇಣೇದಾರರೆಂತ ರುಜುಮಾಡಿದ್ದಾರೆಂದು ಯಿದರಿಂದ ನಿಶ್ಚಯಿಸಿ ತೀರ್ಮಾನ ಮಾಡಲ್ಪಟ್ಟು ಇದೆ.

ನಂಬರು	ಲೇಣೇದಾರ್ರ ಹೆಸರು ವಿವರ ಮತ್ತು ವಾಸಸ್ಥಳ.	ಸಾಲವೆಂದು ರುಜುವಾದ ಮೊಬಲಗು.	ಸಾಲಗಳ ಸ್ವಭಾವ ಪ್ರತಿಭಲ ಮತ್ತು ಏನಾದರೂ ಈಡು.
		ರೂ. ಆ. ಪೈ.	
1	ಮೂಲೂರು ಗಣೇಶಬ್ಯಾಂಕು ಲಿಕ್ವಿಡೇಟರು ಬಿ. ಸುಬ್ಬರಾವು	138—4—9	ಕೋಲಾರ ಮುನ್ಸೀಫ್ ಕೋರ್ಟು 1894—95ನೇ ಇಸವಿ ಜಾರಿ 284ನೇ ನಂಬರ್ ಬಾಡಿವಾರಂಟಿನಲ್ಲಿ ಕಂಡ ಮೊಬಲಗು.

ಸ್ಯ 1895ನೇ ಇಸವಿ ಅಕ್ಟೋಬರು 18ನೇ ತಾರೀಖಿನಲ್ಲಿ ಈ ಕೋರ್ಟ್ ಮೊಹರು ನಮ್ಮ ದಸ್ತಖತ್ತುನಿಶಿ ಕೊಡಲ್ಪಟ್ಟಿತು.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಕೋಲಾರ ಡಿಸ್ಟ್ರಿಕ್ಟ್.

ಸ್ಥಿರಸ್ವತ್ತಿನ ಹರಾಜಿ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 9ನೇ ಮಾರ್ಚಿ 1896.

1. ಕಂದಾಯದ ಬಾಕಿದಾರರಾದ ರವ್ಯೆವರಾಚಾರಿ ವೈನರ್ ಗಾರ್ಡಿಯರ್ ವೆಂಕಟಲಕ್ಷ್ಮಮ್ಮನಿಂದ ಬರಬೇಕಾದ ಜಮಿರ್ಾ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತನ್ನ ಹಕ್ಕು ಬಾಧ್ಯತೆ ಕೋಲಾರ ಡಿಸ್ಟ್ರಿಕ್ಟು ಚಿಕ್ಕಬಳ್ಳಾಪುರ ಸಬ್ ಡಿವಿಜ್ ಆಫಿಸಿನಲ್ಲಿ 1896ನೇ ಇಸವಿ ಏಪ್ರೆಲ್ 21ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1894—95ನೇ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ್ದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಖ್ಮೀಲ್ ವೇರಿಗೆ 1,412—8—4 ರೂಪಾಯಿ ಆಗಿರುತ್ತೆ.